**Vijaya Karnataka (Kannada Daily)**

Date: Wednesday, February 12, 2014 Page No.3

Edition: Mysore Language: Kannada

‘ನಾಯಕತ್ವ ಮತ್ತು ರಾಷ್ಟ್ರೀಯ, ಅಂತಾರಾಷ್ಟ್ರೀಯ ಮಟ್ಟದಲ್ಲಿ ವ್ಯವಹಾರ ನಿರ್ವಹಣೆ’ ಉಪನ್ಯಾಸದಲ್ಲಿ ಡಾ.ಆರ್.ಎ.ಮಶೇಲ್ಕರ್

# ಶಿಕ್ಷಣ ಪದ್ಧತಿಯಲ್ಲಿ ಹೊಸ ಅನ್ವೇಷಣೆ ಅಗತ್ಯ

**ವಿಕ ಸುದ್ದಿಲೋಕ**, ಮೈಸೂರು

‘ಶಿಕ್ಷಣ ಪದ್ಧತಿಯಲ್ಲಿ ಹೊಸ ಅನ್ವೇಷಣೆ ಮಾಡುವ ಮೂಲಕ ಮಾತ್ರ ದೇಶದಲ್ಲಿ ಅಭಿವೃದ್ಧಿ, ಸುಧಾರಣೆ ತರಲು ಸಾಧ್ಯ’ ಎಂದು ಗ್ಲೋಬಲ್ ರಿಸರ್ಚ್ ಅಲೈಯನ್ಸ್‌ನ ಅಧ್ಯಕ್ಷ, ಸಿಎಸ್‌ಐಆರ್‌ನ ಮಾಜಿ ನಿರ್ದೇಶಕ, ಪದ್ಮ ಪ್ರಶಸ್ತಿ ಪುರಸ್ಕೃತ ಡಾ.ಆರ್.ಎ. ಮಶೇಲ್ಕರ್ ಅಭಿಪ್ರಾಯಪಟ್ಟರು.

ನಗರದ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿರುವ ಎಸ್‌ಡಿಎಂ-ಐಎಂಡಿನಲ್ಲಿ ಮಂಗಳವಾರ ನಡೆದ ‘ನಾಯಕತ್ವ ಮತ್ತು ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ವ್ಯವಹಾರ ನಿರ್ವಹಣೆ’ ಕುರಿತ ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘2020ಅನ್ನು ಅನ್ವೇಷಣಾ ವರ್ಷ ಎಂದು ಕರೆಯಲಾಗಿದೆ. ಪ್ರಸಕ್ತ ಜಪಾನ್, ಯುರೋಪ್ ರಾಷ್ಟ್ರಗಳು ಅನ್ವೇಷಣೆಯಲ್ಲಿ ಮುಂಚೂಣಿಯಲ್ಲಿವೆ. ದೇಶದ ಆರ್ಥಿಕತೆಗೆ ಹೆಚ್ಚಿನ ಕೊಡುಗೆ ನೀಡುವ ನಿಟ್ಟಿನಲ್ಲಿ ಅನ್ವೇಷಣೆಗೆ ಹೆಚ್ಚಿನ ಆದ್ಯತೆ ನೀಡಬೇಕಿದೆ’ ಎಂದು ತಿಳಿಸಿದರು.

ಕ್ಯಾಂಪಸ್

**ಪಾಶ್ಚಾತ್ಯ ಮಾದರಿ ಬೇಡ:** ‘ಭಾರತದಲ್ಲಿ ಯಾವುದೇ ಅಭಿವೃದ್ಧಿ ಕಾರ್ಯ ಹಮ್ಮಿಕೊಳ್ಳುವಾಗ ಪಾಶ್ಚಾತ್ಯ ಮಾದರಿಯನ್ನು ಕುರುಡಾಗಿ ಅಳವಡಿಸುವುದು ಬೇಡ. ಸ್ಥಳೀಯತೆಗೆ ಹೊಂದಿಕೆಯಾಗುವ ಮಾದರಿಯನ್ನು ಅಳವಡಿಸುವುದು ಬಹಳ ಮುಖ್ಯ’ ಎಂದು ಅವರು ಅಭಿಪ್ರಾಯಪಟ್ಟರು.

‘ಭಾರತದಲ್ಲಿ ಶೌಚಾಲಯಗಳ ಸಂಖ್ಯೆಗಿಂತ ಮೊಬೈಲ್‌ಗಳ ಸಂಖ್ಯೆ ಹೆಚ್ಚು ಎನ್ನುವ ಮಾತಿದೆ. ಶೌಚಾಲಯಗಳ ಸಂಖ್ಯೆ ಸಾಕಷ್ಟು ಇದ್ದರೂ ಭಾರತದಲ್ಲಿ ಅದನ್ನು ಬಳಸುವವರ ಸಂಖ್ಯೆ ಕಡಿಮೆ ಇದೆ. ಉತ್ತರ ಕರ್ನಾಟಕದಲ್ಲಿ ಮಹಿಳೆಯರು ಬಯಲು ಶೌಚಕ್ಕೆ ಹೋಗುವುದು ಸಾಮಾನ್ಯ. ಮನೆಯೊಳಗೆ ಕಾಲ ಕಳೆಯುವ ಹೆಣ್ಣು ಮಕ್ಕಳು ನೆರೆಮನೆಯ ಹೆಣ್ಣು ಮಕ್ಕಳೊಂದಿಗೆ ಮಾತನಾಡಲು ಆಗುತ್ತದೆ ಎನ್ನುವ ಕಾರಣಕ್ಕೆ ಬಯಲು ಶೌಚಕ್ಕೆ ಹೋಗಲು ಇಷ್ಟಪಡುತ್ತಾರೆ. ಇಲ್ಲಿ ಮಾತನಾಡಲು ಅನುಕೂಲವಾಗುವಂತೆ ಸ್ಥಳಾವಕಾಶ ಒದಗಿಸಿ ಶೌಚಾಲಯದ ಮಾದರಿ ಸಿದ್ಧಪಡಿಸಲಾಯಿತು. ಆಗ ಬಯಲು ಶೌಚಾಲಯಕ್ಕೆ ಹೋಗುತ್ತಿದ್ದ ಹೆಣ್ಣು ಮಕ್ಕಳು ಶೌಚಾಲಯ ಭಳಸಲು ಆರಂಭಿಸಿದರು’ ಎಂದು ತಿಳಿಸಿದರು.

**ಜನರಿಗೆ ಅನ್ವೇಷಣೆ ತಲುಪಲಿ:** ‘ಯಾವುದೇ ಅನ್ವೇಷಣೆ ಜನ ಸಾಮಾನ್ಯರಿಗೆ ತಲುಪುವಂತೆ ಇರಬೇಕು. ಹಿಂದೆ ಕೃತಕ ಕಾಲಿನ ಹಣ 12 ಸಾವಿರ ಡಾಲರ್‌ನಷ್ಟಿತ್ತು. ಆದರೆ ಜೈಪುರ ಕಾಲಿನ ಅನ್ವೇಷಣೆ ಮೂಲಕ ಜನ ಸಾಮಾನ್ಯರಿಗೆ ಕೃತಕ ಕಾಲು ಕೇವಲ 28 ಡಾಲರ್‌ನಲ್ಲಿ ಸಿಗಲು ಸಾಧ್ಯವಾಯಿತು. ಅನ್ವೇಷಣೆ ಜನ ಸಾಮಾನ್ಯರಿಗೆ ತಲುಪಿದಾಗ ಸಮಾನತೆ ಸಾಧಿಸಲು ಸಾಧ್ಯ. ಉತ್ಕೃಷ್ಟ ಮಟ್ಟದ ಅನ್ವೇಷಣೆಯಿಂದ ಮಾತ್ರ ಉತ್ತಮ ಸ್ಪರ್ಧೆ ಏರ್ಪಡಲು ಸಾಧ್ಯ’ ಎಂದು ಅಭಿಪ್ರಾಯಪಟ್ಟರು.

**ಸಂಶೋಧನೆಗೆ ಆದ್ಯತೆ ನೀಡಿ:** ‘ಸಂಶೋಧನೆ ಮಾಡಲು ವಿದ್ಯಾರ್ಥಿಗಳು ಸ್ನಾತಕೋತ್ತರ, ಪದವಿವರೆಗೆ ಕಾಯುವ ಅಗತ್ಯವಿಲ್ಲ. ಆಸಕ್ತ ಕ್ಷೇತ್ರದಲ್ಲಿ ಪದವಿ ಪಡೆಯುವ ಮುನ್ನವೇ ಸಂಶೋಧನೆ ಮಾಡಲು ಯತ್ನಿಸಬೇಕು. ಸಂಶೋಧನೆ ಮೂಲಕ ಮಾತ್ರ ಹೊಸ ಜ್ಞಾನದ ಅನ್ವೇಷಣೆಯಾಗುತ್ತದೆ’ ಎಂದರು.

ಪ್ರಾಂಶುಪಾಲ ಡಾ.ಎನ್.ಆರ್. ಪರಶುರಾಮನ್, ವಿದ್ಯಾರ್ಥಿಗಳು ಭಾಗವಹಿಸಿದ್ದರು.





ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿರುವ ಎಸ್‌ಡಿಎಂ-ಐಎಂಡಿನಲ್ಲಿ ಮಂಗಳವಾರ ನಡೆದ ಉಪನ್ಯಾಸ ಕಾರ್ಯಕ್ರಮದಲ್ಲಿ ಗ್ಲೋಬಲ್ ರಿಸರ್ಚ್ ಅಲೈಯನ್ಸ್‌ನ ಅಧ್ಯಕ್ಷ, ಸಿಎಸ್‌ಐಆರ್‌ನ ಮಾಜಿ ನಿರ್ದೇಶಕ, ಪದ್ಮವಿಭೂಷಣ ಡಾ.ಆರ್.ಎ.ಮಶೇಲ್ಕರ್ ಮಾತನಾಡಿದರು. ಕಾಲೇಜಿನ ವಿದ್ಯಾರ್ಥಿಗಳು ಭಾಗವಹಿಸಿದ್ದರು.

> ‘ಸಂಶೋಧನೆ ಮಾಡಲು ವಿದ್ಯಾರ್ಥಿಗಳು ಸ್ನಾತಕೋತ್ತರ, ಪದವಿವರೆಗೆ ಕಾಯುವ ಅಗತ್ಯವಿಲ್ಲ, ಆಸಕ್ತ ಕ್ಷೇತ್ರದಲ್ಲಿ ಪದವಿ ಪಡೆಯುವ ಮುನ್ನವೇ ಸಂಶೋಧನೆ ಮಾಡಲು ಯತ್ನಿಸಬೇಕು. ಸಂಶೋಧನೆ ಮೂಲಕ ಮಾತ್ರ ಹೊಸ ಜ್ಞಾನದ ಅನ್ವೇಷಣೆಯಾಗುತ್ತದೆ’.
>
> **- ಡಾ.ಆರ್.ಎ. ಮಶೇಲ್ಕರ್,** ಗ್ಲೋಬಲ್ ರಿಸರ್ಚ್ ಅಲೈಯನ್ಸ್‌ನ ಅಧ್ಯಕ್ಷ